# ಸಿಡ್ನಿಯಲ್ಲಿ ರಾಗ ಹಾಸ್ಯ ಲಹರಿ ಕಾರ್ಯಕ್ರಮ

ವರದಿ: ಶ್ರೀ. ವಿಜಯಕುಮಾರ್ ಹಲಗಲಿ

ಸಿಡ್ನಿ ಕನ್ನಡ ಸಂಘವು ಪ್ರತಿ ವರ್ಷದಂತೆ ಈ ಬಾರಿಯೂ ಒಂದು ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮವನ್ನು ಇತ್ತೀಚೆಗೆ ಏರ್ಪಡಿಸಿತ್ತು. ಏಷಿಯಾ ಪೆಸಿಫಿಕ್ ಕನ್ನಡ ಒಕ್ಕೂಟ ಹಾಗೂ ಕರ್ನಾಟಕ ಸರಕಾರದ ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆಗಳ ಸಹಯೋಗದಲ್ಲಿ "ರಾಗ ಹಾಸ್ಯ ಲಹರಿ" ಎಂಬ ಮನರಂಜನಾ ಸಂಜೆಯನ್ನು ಸಿಡ್ನಿಯ ಕನ್ನಡ ಸಮುದಾಯಕ್ಕೆ ಅರ್ಪಿಸಿತು.






ಈ ಕಾರ್ಯಕ್ರಮದಲ್ಲಿ ಬಾಗವಹಿಸಲು ಕರ್ನಾಟಕದಿಂದ ಹೆಸರಾಂತ ಚಲನಚಿತ್ರ ಹಿನ್ನೆಲೆ ಗಾಯಕ ಶ್ರೀ: ಬದರಿ ಪ್ರಸಾದ್ ಮತ್ತು ಉದಯೋನ್ಮುಖ  ಹಾಸ್ಯ ಮಾತುಗಾರ ಶ್ರೀ: ಬಸವರಾಜ ಮಹಾಮನಿಯವರುಗಳು ಆಗಮಿಸಿದ್ದರು.

ಸಂಜೆ ೭ ಘಂಟೆಗೆ ಪ್ರಾರಂಭವಾದ ಕಾರ್ಯಕ್ರಮವು ಮಧ್ಯರಾತ್ರಿಯ ನಂತರವೂ ಮುಂದುವರೆದು ಸಿಡ್ನಿಯ ಕನ್ನಡಿಗರಿಗೆ ಸುಮಧುರ ಸಂಗೀತದ ಸುಧೆಯನ್ನು ಮತ್ತು ಉತ್ತರ ಕರ್ನಾಟಕದ ಕನ್ನಡ ಭಾಷೆಯ ರಸದೌತಣವನ್ನು ನೀಡುವಲ್ಲಿ ಯಶಸ್ವಿಯಾಯಿತು.








ಸ್ಥಳೀಯ ಗಣ್ಯ ಅಥಿತಿಗಳು, ಕಲಾವಿದರುಗಳು ಮತ್ತು ಸಿಡ್ನಿ ಕನ್ನಡ ಸಂಘದ ಅಧ್ಯಕ್ಷರು ಸಾಂಪ್ರದಾಯಿಕ ಜ್ಯೋತಿಯನ್ನು ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟರು. ಕಲಾವಿದರುಗಳು ಸ್ಥಳೀಯ ಗಾಯಕಿಯರ ಜೊತೆಗೂಡಿ ಕರ್ನಾಟಕದ ನಾಡ ಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮವು ಆರಂಭಗೊಂಡಿತು. ಶ್ರೀ: ಬದರಿ ಪ್ರಸಾದ್ ಅವರು ತಮ್ಮ ಮೊದಲ ಗೀತೆಯಾಗಿ ವರನಟ ದಿವಂಗತ ಡಾ: ರಾಜಕುಮಾರ ಹಾಡಿದ್ದ "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು" ಹಾಡನ್ನು ಹಾಡಿದಾಗ ಸಿಡ್ನಿಯ ಕನ್ನಡಿಗರೆಲ್ಲರಿಗೆ ಮೈ ನವಿರೇಳುವ ಅನುಭವವಾಯಿತು. "ಗಂಧದ ಗುಡಿ" "ವಿಜಯನಗರದ ವೀರಪುತ್ರ" ಮುಂತಾದ ಹಳೆಯ ಚಿತ್ರಗಳ ಹಾಡುಗಳನ್ನು ಹಾಡಿ ಕನ್ನಡತನವನ್ನು ಬಡಿದೆಬ್ಬಿಸುವಲ್ಲಿ ಶ್ರೀ: ಬದರಿ ಪ್ರಸಾದ್  ಯಶಸ್ವಿಯಾದರು. ಜೊತೆಗೆ ಇತ್ತಿಚಿನ ಹೊಸ ಚಲನಚಿತ್ರ ಗೀತೆಗಳು ಮತ್ತು ತಾವೇ ಹಾಡಿದ ಚಿತ್ರಗೀತೆಗಳನ್ನು ಹಾಡಿ ಸಭಿಕರನ್ನು ರಂಜಿಸಿದರು. ಶ್ರೀ: ಬದರಿ ಪ್ರಸಾದ್ ಅವರ ಜೊತೆಗೆ ಯುಗಳ ಗೀತೆಗಳಿಗೆ ಸ್ಥಳೀಯ ಕನ್ನಡ ಸಮುದಾಯದ

ಶ್ರೀಮತಿ: ಪುಷ್ಪಾ ಜಗದೀಶ್, ರೇಖಾ ಶಶಿಕಾಂತ್, ಗೀತಾ ಗೋಪಿನಾಥ್ ಮತ್ತು ಕುಮಾರಿ ಸವಿತಾ ರಾಜು ಅವರುಗಳು ಸಹಗಾಯನವು ಕಾರ್ಯಕ್ರಮದ ಮತ್ತೊಂದು ವಿಶೇಷವಾಗಿತ್ತು.

ಶ್ರೀ: ಬಸವರಾಜ್ ಮಹಾಮನಿಯವರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಹಾಸ್ಯ ಪ್ರಸಂಗಗಳನ್ನು ನಿರೂಪಿಸಿ ಸಭಿಕರೆಲ್ಲರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸಿದರು. ಉತ್ತರ ಕರ್ನಾಟಕದ ಕನ್ನಡ ಭಾಷೆಯ ಹಾಸ್ಯದ ಸೊಗಸನ್ನು ಪರಿಚಯಿಸಿ ಸಭಿಕರನ್ನು ಮನರಂಜಿಸಿದರು. ಬೆಂಗಳೂರು ಮತ್ತು ಮೈಸೂರು ಕಡೆಯ ಕನ್ನಡ ಭಾಷೆ ಹಾಗೂ ಉತ್ತರ ಕರ್ನಾಟಕದ ಕನ್ನಡ ಭಾಷೆಯ ವ್ಯತ್ಯಾಸಗಳಿಂದ ಉಂಟಾಗುವ ಗೊಂದಲಮಯ ಪರಿಸ್ಥಿತಿಗಳನ್ನು ಸಭಿಕರೆದುರಿಗೆ ತೆರೆದಿಟ್ಟಾಗ ಎಲ್ಲರೂ ಮನಸಾರೆ ನಕ್ಕು ಆನಂದಿಸಿದರು. ಹೈದರಾಬಾದ್ ಕರ್ನಾಟಕದ ಉರ್ದು ಮಿಶ್ರಿತ ಮತ್ತು ತೆಲುಗು ಭಾಷೆಯ ಪ್ರಭಾವದಿಂದ ಪ್ರೇರಿತವಾದ ಕನ್ನಡ ಪ್ರೇರಿತವಾದ ಕನ್ನಡ ಭಾಷೆಯ ರುಚಿಯನ್ನು ಉಣಬಡಿಸಿದರು. ಶ್ರೀ: ಬಸವರಾಜ್ ಮಹಾಮನಿಯವರ ಹಾಸ್ಯದ ಮಾತುಗಾರಿಕೆಯ ಹೊನಲಿನಲ್ಲಿ ತೇಲುತ್ತಿದ್ದ ಸಭಿಕರಿಗೆ ಸಮಯ ಸರಿದದ್ದು ಅರಿವಾಗಲೇ ಇಲ್ಲ.

ಶ್ರೀ: ಬದರಿ ಪ್ರಸಾದ್ ಅವರು ತಮ್ಮ ಎರಡನೆ ಭಾಗದ ಕಾರ್ಯಕ್ರಮದಲ್ಲಿ ಸಭಿಕರಿಂದ ಬಂದ ಬೇಡಿಕೆಯ ಹಾಡುಗಳನ್ನು ಹಾಡಿದರು. ತಮ್ಮ ಯಶಸ್ಸಿಗೆ ಕಾರಣವಾದ ತಮ್ಮ ತಾಯಿಯನ್ನು ನೆನೆದು ಅರ್ಪಿಸಿದ ಹಾಡು ಎಲ್ಲ ಸಭಿಕರ ಪ್ರಶಂಶೆಗೆ ಪಾತ್ರವಾಯಿತು. ಕಾರ್ಯಕ್ರಮದಾದ್ಯಂತ ಇಬ್ಬರೂ ಕಲಾವಿದರ ಕಲೆಯನ್ನು ಮೆಚ್ಚಿ ನೆರೆದ ಸಭಾಸದರೆಲ್ಲರು ದೀರ್ಘ ಚಪ್ಪಾಳೆಯ ಮೂಲಕ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.
ದಿನದ ಔಪಚಾರಿಕ ಸಭೆಯನ್ನು ಆರಂಭಿಸುತ್ತ ಕನ್ನಡ ಸಂಘದ ಅಧ್ಯಕ್ಷರು ಮತ್ತು ೨೦೧೦ರ ರಾಜ್ಯೋತ್ಸವ






ಪ್ರಶಸ್ತಿ ವಿಜೇತ ಡಾ।। ಸಿದ್ಧಲಿಂಗೇಶ್ವರ ಓರೆಕೊಂಡಿಯವರು  ಆಗಮಿಸಿದ್ದ ಅಥಿತಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಸಂಸತ್ ಸದಸ್ಯೆ ಶ್ರೀಮತಿ: ಮಿಷೆಲ್ ರೋವ್ಲಂಡ್ ಆಗಮಿಸಿದ್ದರು. ಮತ್ತೊಬ್ಬ ಅಥಿತಿಗಳಾಗಿ ನ್ಯೂ ಸೌಥ್ ವೇಲ್ಸ್ ರಾಜ್ಯದ ಕೆಳಮನೆಯ ಸದಸ್ಯರಾದ ಶ್ರೀ: ಜೆಫ್ ಲೀ ಅವರು ರಾಜ್ಯ ಸರಕಾರದ ಸಮುದಾಯ ಮತ್ತು ಪೌರತ್ವ ಖಾತೆಯ ಸಚಿವರನ್ನು ಪ್ರತಿನಿಧಿಸಿದ್ದರು. ಅಥಿತಿಗಳಿಬ್ಬರೂ ಮಾತನಾಡಿ ಕನ್ನಡಿಗರು ಮತ್ತು ಭಾರತೀಯರು ಆಸ್ಟ್ರೇಲಿಯಾದ ಸಮಾಜದಲ್ಲಿ ಬೆರೆತು ತಮ್ಮ ಭಾಷೆ, ಸಂಸ್ಕೃತಿಗಳನ್ನು ಉಳಿಸಿಕೊಳ್ಳುವದರ ಜೊತೆಗೆ ಆಸ್ಟ್ರೇಲಿಯಾದ ಬಹು ಜನಾಂಗೀಯ ಸಮಾಜದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ ಎಂದು ಪ್ರಶಂಶಿಸಿದರು.  ನೂತನ ಸಂಸತ್ ಸದಸ್ಯರಾದ ಶ್ರೀ. ಜೆಫ್ ಲೀ ಅವರು ಮಾತನಾಡಿ ತಮ್ಮ ಮತಕ್ಷೇತ್ರದಲ್ಲಿ ನಡೆಯುವ ಕನ್ನಡ ಸಮುದಾಯದ ಚಟುವಟಿಕೆಗಳಿಗೆ ಸಾಧ್ಯವಾದ ಸಹಾಯ ಮಾಡುವದಾಗಿ ತಿಳಿಸಿದರು. ಇಬ್ಬರೂ ಅಥಿತಿಗಳು ಅಂತರ್ಜಾಲದಲ್ಲಿ ತಾವು ಸಂಶೋಧಿಸಿದ ಕನ್ನಡ ಭಾಷೆ, ಕನ್ನಡಿಗರು ಮತ್ತು ಕರ್ನಾಟಕದ ಬಗ್ಗೆ ಅಂಕಿ ಅಂಶಗಳನ್ನು ತಿಳಿಸಿದಾಗ ಸಭಿಕರೆಲ್ಲ ಕರತಾಡನದೊಂದಿಗೆ ಹರ್ಷ ವ್ಯಕ್ತಪಡಿಸಿದರು. ಸಂಯುಕ್ತ ಭಾರತೀಯ ಸಂಘಟನೆಯ ನೂತನ ಅಧ್ಯಕ್ಷ ಶ್ರೀ. ಅಮರಿಂದರ್ ಬಾಜ್ವಾ ಅವರು ಮಾತನಾಡುತ್ತ ಸಿಡ್ನಿಯ ಭಾರತೀಯ ಸಮುದಾಯದಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದಿರುವ ಕನ್ನಡ ಸಮುದಾಯದ ಸಾಮಾಜಿಕ ಕೊಡುಗೆಯನ್ನು ಸ್ಮರಿಸಿದರು ಮತ್ತು ಮುಂಬರುವ ಭಾರತದ ಸ್ವಾತಂತ್ರ್ಯ ದಿನದ ಕಾರ್ಯಕ್ರಮಕ್ಕೆ ಎಲ್ಲರನ್ನು ಆಹ್ವಾನಿಸಿದರು.









ಸಿಡ್ನಿ ಕನ್ನಡ ಸಂಘದ ಪರವಾಗಿ ಕಲಾವಿದರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸಂಸತ್ ಸದಸ್ಯೆ ಶ್ರೀಮತಿ: ಮಿಷೆಲ್ ರೋವ್ಲಂಡ್ ಅವರು ಶ್ರೀ: ಮಹಾಮನಿಯವರನ್ನು ಶಾಲು ಹೊದಿಸಿ ಮತ್ತು ಸ್ಮರಣ ಫಲಕವನ್ನು ನೀಡಿ ಸನ್ಮಾನಿಸಿದರು. ಶ್ರೀ: ಬದರಿ ಪ್ರಸಾದ್ ಅವರನ್ನು ಶ್ರೀ. ಜೆಫ್ ಲೀ ಅವರು ಶಾಲು ಹೊದಿಸಿ ಮತ್ತು ಸ್ಮರಣ ಫಲಕವನ್ನು ನೀಡಿ ಸನ್ಮಾನಿಸಿದರು.ಇಬ್ಬರೂ ಕಲಾವಿದರುಗಳು ತಮ್ಮ ಸನ್ಮಾನಕ್ಕೆ ಉತ್ತರವಾಗಿ ಮಾತನಾಡಿ ಆಸ್ಟ್ರೇಲಿಯಾ ದೇಶದ ಪ್ರವಾಸಕ್ಕೆ ತಮ್ಮನ್ನು ಆಹ್ವಾನಿಸಿ ತಮ್ಮ ಪ್ರತಿಭೆಯನ್ನು ಪ್ರೋತ್ಸಾಹಿಸಿದ ಸಿಡ್ನಿ ಕನ್ನಡ ಸಂಘ ಹಾಗೂ ಕನ್ನಡಿಗರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ಅದಲ್ಲದೆ ಸ್ಥಳೀಯ ಯುವ ಪ್ರತಿಭೆಗಳನ್ನು ಸಿಡ್ನಿ ಕನ್ನಡ ಸಂಘದ ಭಾರತ ಸಂಚಾಲಕರಾದ ಶ್ರಿಯುತ ಆರಾಧ್ಯರವರು ಸ್ಮರಣ ಫಲಕವನ್ನುನೀಡಿ ಸನ್ಮಾನಿಸಿದರು.





ಕಾರ್ಯಕ್ರಮದ ದಕ್ಷನಿರೂಪಣೆಯನ್ನು ಶ್ರೀಮತಿ: ಲಕ್ಷ್ಮೀ ಶೇಖರ್ ನಡೆಸಿಕೊಟ್ಟರು. ಔಪಚಾರಿಕ ಕಾರ್ಯಕ್ರಮವನ್ನು ಸಿಡ್ನಿ ಕನ್ನಡ ಸಂಘದ ಉಪಾಧ್ಯಕ್ಷರಾದ ಶ್ರೀ: ವಿಜಯಕುಮಾರ್ ಹಲಗಲಿ ನಿರೂಪಿಸಿದರು. ಕೊನೆಯಲ್ಲಿಕಾರ್ಯದರ್ಶಿ ಶ್ರೀ: ದಕ್ಷಿಣಮೂರ್ತಿಯವರು ವಂದನೆ ಸಲ್ಲಿಸಿದರು. ಕಾರ್ಯಕ್ರಮವು ಯಶಸ್ವಿಯಾಗಲು ಪ್ರೋತ್ಸಾಹಿಸಿದ ಸಿಡ್ನಿಯ ಕನ್ನಡಾಭಿಮಾನಿಗಳೆಲ್ಲರಿಗೂ ಸಿಡ್ನಿ ಕನ್ನಡ ಸಂಘದ ಕೃತಜ್ಞತೆಗಳು.